ಓ.ಎಸ್.ನಂಃ 114/2015
**ಪಿಡಬ್ಲ್ಯೂ-2**

**ಸಾಕ್ಷಿಯನ್ನು ಕರೆಯಿಸಿ ದಿನಾಂಕಃ 26.11.2025 ರಂದು ಪ್ರಮಾಣಿಕರಿಸಲಾಯಿತು.**

**ಪಾಟೀ ಸವಾಲು: ಪ್ರತಿವಾದಿ ಪರ ವಕೀಲರಿಂದಃ**

ಈ ದಾವೆಯನ್ನು ಸಲ್ಲಿಸಲು ನಾನೇ ಕಾರಣ ಎಂದರೆ ಸರಿಯಲ್ಲ. ದಾವೆ ಸಲ್ಲಿಸುವ ಕಾಲಕ್ಕಾಗಲಿ ತದನಂತರವಾಗಲಿ ವಾದಿ ನ್ಯಾಯಾಲಯಕ್ಕೆ ಎಂದಿಗೂ ಹಾಜರಾಗಿಲ್ಲ ಎಂದರೆ ಸರಿಯಲ್ಲ. ರೇಣುಕಾಂಭರವರಿಗೆ ಈ ದಾವೆ ಸಲ್ಲಿಸುವ ಉದ್ದೇಶ ಇರಲಿಲ್ಲ ಮತ್ತು ನನ್ನ ಒತ್ತಡಕ್ಕೆ ಮಣಿದು ಈ ದಾವೆ ಸಲ್ಲಿಸಿದ್ದಾರೆ ಎಂದರೆ ಸರಿಯಲ್ಲ. ಪಿಡಬ್ಲ್ಯೂ-2 ಮಹದೇವಸ್ವಾಮಿ ವಾದಿಯ ಮಗ ಎಂದರೆ ಸರಿ. ವಾದಿಯ ಮಗ ಆರೋಗ್ಯವಾಗಿದ್ದರು ನಾನು ವಾದಿಯ ಪರ ಜಿಪಿಎ ಪಡೆದು ಅವರ ಪರ ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸಾಕ್ಷಿ ಅವರು ಅನಾರೋಗ್ಯದಿಂದ ಇದ್ದರು ಎಂದು ನುಡಿಯುತ್ತಾರೆ. ವಾದಿ ಮರಣ ಹೊಂದಿದ ದಿನಾಂಕ ನನಗೆ ನೆನಪಿಲ್ಲ. ದಿಃ 07.08.2024 ರಂದು ವಾದಿ ಮರಣ ಹೊಂದಿದರು ಎಂದರೆ ನನಗೆ ನೆನಪಿಲ್ಲ. ವಾದಿಯ ಮರಣವನ್ನು ನಾನು ನ್ಯಾಯಾಲಯದ ಗಮನಕ್ಕೆ ಯಾವ ದಿನಾಂಕದಂದು ತಂದೆ ಎಂದು ನನಗೆ ನೆನಪಿಲ್ಲ. ವಾದಿಯ ಮರಣವನ್ನು ನಾನು ನ್ಯಾಯಾಲಯದ ಗಮನಕ್ಕೆ ತಂದಿಲ್ಲ ಮತ್ತು ಅದಕ್ಕೆ ಯಾವುದೆ ದಾಖಲೆ ನೀಡಿಲ್ಲ ಎಂದರೆ ಸರಿಯಲ್ಲ.

ಪ್ರತಿವಾದಿ ವಾದಿಯ ಮರಣವಾದ ವಿಷಯವನ್ನು ನ್ಯಾಯಾಲಯದ ಗಮನಕ್ಕೆ ತಂದರು ಎಂದರೆ ಸರಿಯಲ್ಲ. ದಿಃ 22.08.2024 ಮತ್ತು 12.09.2024 ರಂದು ವಾದಿಯ ಮರಣವನ್ನು ನ್ಯಾಯಾಲಯದ ಗಮನಕ್ಕೆ ತಾರದೆ ನಾನೇ ಸಾಕ್ಷ್ಯ ನುಡಿಯಲು ಬಂದಿದ್ದೆ ಎಂದರೆ ಸರಿಯಲ್ಲ. ಸಾಕ್ಷಿಗೆ ವಾದಿಯ ಶಿವಗಣಾರಾಧನಾ ಆಹ್ವಾನ ಪತ್ರಿಕೆಯನ್ನು ತೋರಿಸಲಾಗಿ ಅದನ್ನು ಒಪ್ಪಿಕೊಂಡ ಕಾರಣ, ಅದನ್ನು ನಿಡಿ1 ಎಂದು ಗುರುತಿಸಲಾಯಿತು. ನಿಡಿ1 ನ್ನು ಪ್ರತಿವಾದಿ ನ್ಯಾಯಾಲಯಕ್ಕೆ ಹಾಜರುಪಡಿಸಿದ್ದಾರೆ ಎಂದರೆ ಸರಿಯಲ್ಲ. ದಾವೆ ಸಲ್ಲಿಸುವ ಕಾಲಕ್ಕೆ ಪ್ರತಿವಾದಿಗೆ ನಿವೇಶನ ಇರಲಿಲ್ಲ ಎಂದರೆ ಸರಿಯಲ್ಲ. ಸದರಿ ನಿವೇಶನ ಗುರುತಾಯಮ್ಮ ರವರ ಹೆಸರಿಗೆ ಇತ್ತು ಎಂದರೆ ಸಾಕ್ಷಿ ಇತ್ತೀಚೆಗೆ ವರ್ಗಾಹಿಸಲಾಯಿತು ಎಂದು

ನುಡಿಯುತ್ತಾರೆ. ನನ್ನ ಪ್ರಮಾಣ ಪತ್ರದಲ್ಲಿ ಬರೆಸಿರುವಂತೆ ಪ್ರತಿವಾದಿ ತನ್ನ ಮನೆ ಮುಂಭಾಗದಲ್ಲಿ ರಸ್ತೆಯನ್ನು ಅತೀಕ್ರಮಿಸಿ ಪ್ರಾರಂಭದಲ್ಲಿ ಕಲ್ಲುಕಂಬಗಳನ್ನು ನೆಟ್ಟು ನಂತರ ಅಕ್ರಮವಾಗಿ ಸೀಟ್ ಹಾಕಿರುತ್ತಾರೆ ಎಂದು ವಾದ ಪತ್ರದಲ್ಲಿ ನಮೂದು ಇಲ್ಲ ಎಂದರೆ ನನಗೆ ಗೊತ್ತಿಲ್ಲ.

ಸಾರ್ವಜನಿಕ ಹಿತಾಸಕ್ತಿ ಮೊಕದ್ದಮೆ ದಾಖಲಿಸಲು ತೊಂದರೆ ಇತ್ತ ಎಂದರೆ ಸಾಕ್ಷಿ ಅಕ್ಕ ಪಕ್ಕದವರನ್ನು ಕೇಳಬೇಕು ಎಂದು ನುಡಿಯುತ್ತಾರೆ. ದಾವ ಸ್ವತ್ತಿನ ಅಕ್ಕಪಕ್ಕದಲ್ಲಿ ನನ್ನ ನಿವೇಶನ ಇರುವ ಬಗ್ಗೆ ದಾಖಲೆ ನೀಡಿಲ್ಲ. ಪ್ರತಿವಾದಿ ನನ್ನ ವಿರುದ್ಧ ದ್ವೇಷ ಸಾಧಿಸಿದ್ದಾರೆ ಎಂದು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ರಸ್ತೆಯಲ್ಲಿ ಶೇಡ್ ನಿರ್ಮಿಸಲು ತೊಂದರೆಯಾಗುತ್ತಿದೆ ಎಂದು ವಾದ ಪತ್ರದಲ್ಲಿ ಬರೆಸಿಲ್ಲ ಎಂದರೆ ನನಗೆ ಗೊತ್ತಿಲ್ಲ. ಗುರುತಾಯಮ್ಮ ತಮ್ಮ ನಿವೇಶನದ ವಿಸ್ತೀರ್ಣದ ಪರಿದಿಯಲ್ಲಿ ಮಾತ್ರ ಮನೆ ನಿರ್ಮಿಸಿದ್ದಾರೆ ಎಂದರೆ ಸರಿಯಲ್ಲ. ಸದರಿ ನಿವೇಶನಕ್ಕೂ ಪ್ರತಿವಾದಿಗೂ ಯಾವುದೆ ಸಂಬಂಧ ಇಲ್ಲ ಎಂದರೆ ಸಾಕ್ಷಿ ಮಧ್ಯ ಬೀದಿ ಇದೆ ಎಂದು ನುಡಿಯುತ್ತಾರೆ. ಪ್ರತಿವಾದಿಯ ಮಗಳು ಗುರುತಾಯಮ್ಮ ತಮ್ಮ ನಿವೇಶನದಲ್ಲಿ ಮನೆ ನಿರ್ಮಿಸಿ ಸುತ್ತಲು ಖಾಲಿ ಜಾಗ ಬಿಟ್ಟಿದ್ದಾರೆ ಎಂದರೆ ಸರಿಯಲ್ಲ. ಪ್ರತಿವಾದಿಯ ಮೇಲಿನ ದ್ವೇಷದಿಂದ ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ರಸ್ತೆಯ ಯಾವುದೆ ಅತೀಕ್ರಮವಾಗಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

**(ಗಿರೀಶ ಆರ್.ಬಿ)**

ಒಂದನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ

ಗುಂಡ್ಲುಪೇಟೆ